**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 21.06.2025**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿದ್ದೇನೆ. ಅಸಲು ದಾವೆ 446/2015 ರ ದಾವೆ 2015 ರಿಂದ 2021 ರವರೆಗೆ ನ್ಯಾಯಾಲಯದಲ್ಲಿ ನಡೆದಿದೆ ಎಂದರೆ ಸರಿ. ಆ ದಾವೆಯು 2015 ರಿಂದ 2021 ರವರೆಗೆ ನಡೆದ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದೆ ಎಂದರೆ ಸರಿ. ಪ್ರಕರಣ ನಡೆಯುವಾಗ ಏಳು ವರ್ಷಗಳ ಕಾಲ ನೀವು ಅನಾರೋಗ್ಯಕ್ಕೆ ತುತ್ತಾಗಿರಲಿಲ್ಲ ಎಂದರೆ ಸರಿ. ವಿಚಾರಣಾ ನ್ಯಾಯಾಲಯ ದಾವೆಯನ್ನು ನಡೆಸಲು ನಿಮಗೆ ಸಾಕಷ್ಟು ಕಾಲಾವಕಾಶ ನೀಡಿತ್ತು ಎಂದರೆ ಸರಿ.

2. ನಿಮಗೆ ಜಾಂಡೀಸ್ ಕಾಯಿಲೆ ಬಂದಿತ್ತು ಎನ್ನುವ ಬಗ್ಗೆ ಹಾಗೂ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದಾಖಲೆ ಏನಾದರೂ ನೀಡಿರುತ್ತೀರಾ ಎಂದರೆ ಸಾಕ್ಷಿ ನಾಟೀ ಔಷಧಿ ತೆಗೆದುಕೊಂಡಿರುತ್ತೇನೆಂದು ಹೇಳುತ್ತಾರೆ. ನಾಟೀ ಔಷಧಿ ಏನು ಕೊಡುತ್ತಿದ್ದರು ಎಂದು ಔಷಧಿ ಕೊಡುತ್ತಿದ್ದವರಿಂದ ವರದಿ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಿಚಾರಣಾ ನ್ಯಾಯಾಲಯ ನಿಮಗೆ ಸಾಕಷ್ಟು ಕಾಲಾವ ಕಾಶ ನೀಡಿದ್ದರೂ ಅದನ್ನು ಸರಿಯಾಗಿ ಬಳಸಿಕೊಳ್ಳದೆ ಜಾಂಡೀಸ್ ಕಾಯಿಲೆ ಇತ್ತು ಎಂದು ಸುಳ್ಳು ಹೇಳಿ ಈ ಅಪೀಲನ್ನು ವಿಳಂಬವಾಗಿ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ವಿಳಂಬಕ್ಕೆ ನೀಡಿರುವ ಕಾರಣಗಳು ಪುರಸ್ಕರಿಸಲು ಪೂರಕವಾಗಿಲ್ಲ ಎಂದರೆ ಸರಿಯಲ್ಲ.

*ಸುಳ್ಳು ಪ್ರಮಾಣಪತ್ರದ ಸಂಗತಿಗಳನ್ನು ಸಲ್ಲಿಸಿ ಅದಕ್ಕೆ ಪೂರಕವಾರ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***